Drinking Water Facility to Villagers of Tangadag

439 SRI M. M. SAJJAN (Muddebiha).—

Will the Minister for Rural Development and Social Welfare be pleased to state ;—

when drinking water from the bore-wells which are sunk about some years back will be supplied to the suffering villagers of Tangadagi in Muddebihal Taluk of Bijapur District.

SRI N. RACHAIAH (Minister for Rural Development and Social Welfare).—

Executive Engineer PHE Division, Bijapur has been instructed to get the repairs done and water supply resumed early.

ಶ್ರೀ ಎಂ. ಎಂ. ಸಜ್ಜನ್ :— ನನ್ನ ಪ್ರಶ್ನೆಗೆ ಉತ್ತರವಾಗಿ ತ್ವರಿತಗೊಳಿಸಬೇಕೆಂದು 'ಎಂಬ ಒಂದು ಪದ ಇದೆ' ತ್ವರಿತವಾಗಿ ಅಂದರೆ ಎಷ್ಟು ಅವಧಿ? ಇದು ಅನಿವಾರ್ಯವಾದ ಉತ್ತರವೋ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ತಂಗಡಗಿ ಗ್ರಾಮದಲ್ಲಿ ಮೂರು ಸ್ಥಳಗಳಲ್ಲಿ ಮೂರು ಬೋರ್‌ವೆಲ್‌ಗಳನ್ನು ತೋಡಿಸಲು ೪ ಅಂಗುಲಗಳುಳ್ಳ ಡಯಾ ಮೀಟರ್‌ಗೆ ಸಂಬಂಧಪಟ್ಟ ಪಂಪ್‌ಸೆಟ್‌ಗಳು ಮ್ಯಾನ್ಯುಫ್ಯಾಕ್ಚರ್ ಆಗಲಿಲ್ಲವೆಂದು ಹೇಳುತ್ತಲೇ ಬರುತ್ತಿದ್ದಾರೆ. ಅದು ಮ್ಯಾನ್ಯುಫ್ಯಾಕ್ಚರ್ ಆಗುವುದಿಲವೆಂದು ಈಗ ನನಗೆ ಖಚಿತವಾಗಿ ಕಾಣುತ್ತಿದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಆದಕ್ಕೆ ಸಂಬಂಧಪಟ್ಟ ಪಂಪ್‌ಸೆಟ್ ದೊರೆಯದೇ ಇದ್ದಲ್ಲಿ ಅದನ್ನು ದುರಸ್ತಿಮಾಡುವುದು ಹೇಗೆ? ಗ್ರಾಮಸ್ಥರಿಗೆ ನೀರು ಕೊಡುವುದು ಹೇಗೆ? ನಾನು ಈ ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ಈ ವಿಚಾರವನ್ನು ಸಂಬಂಧಪಟ್ಟ ಚೀಫ್ ಇಂಜಿನಿಯರ್ ಅವರಿಗೆ ತಿಳಿಸಿ ಇದರ ಬಗ್ಗೆ ತೀವ್ರಗತಿಯಿಂದ ಕ್ರಮ ತಗೆದುಕೋಳ್ಳಬೇಕೆಂದು ಈಗಾಗಲೇ ಅನೇಕಸಾರಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೂ ಈ ವಿಚಾರವನ್ನು ಹೇಳಿದೆ. ಅವರೂ ಸಹ ಅದನ್ನು ತೀವ್ರವಾಗಿ ಮಾಡುತ್ತೇನೆಂದೂ ಈ ದುರಸ್ತಿ ಕೆಲಸವನ್ನು ತ್ವರಿತವಾಗಿ ಮಾಡಿಸಿಕೊಡುತ್ತೇನೆಂದು ಹೇಳಿದರು ನನಗೆ ತಿಳಿದಮಟ್ಟಿಗೆ ಸರ್ಕಾರಕ್ಕೆ ಸಮಂಜಸವಾದ ಹಾಗೂ ಸಮರ್ಪಕವಾದ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿಲ್ಲವೆಂದು ಗೊತ್ತಾಗಿದೆ. ಅಂತೂ ದುರಸ್ತಿ ಕೆಲಸ ಇದುವರೆಗೂ ಆಗಿಲ್ಲ. ಇದು ಜೀವನಕ್ಕೆ ಅಗತ್ಯವಾಗಿ ಬೇಕಾದ ನೀರಿನ ಪ್ರಶ್ನೆ. ೧೯೮೧-೮೭ನೇ ಸಾಲಿನಲ್ಲಿ ಮಾನ್ಯ ಶ್ರೀ ಸಿದ್ದವೀರಪ್ಪನವರು ನಮ್ಮ ಜಿಲ್ಲೆಗೆ ಬೇಟಿಮಾಡಿದಾಗ ಅಲ್ಲಿನ ಜನರು ಈ ವಿಚಾರದ ಬಗ್ಗೆ ಒಂದು ಪದಕಟ್ಟಿಹಾಡಿದ್ದನ್ನು ಕೇಳಿ ಅವರೂ ಸಹ ಪಿ.ಎಚ್.ಇ. ಡಿವಿಷನ್ ಇಂಜಿನಿಯರ್ ಅವರಿಗೂ ಇದರ ಬಗ್ಗೆ ಸೂಚನೆ ಕೊಟ್ಟರು. ಆದರೂ ಅಲ್ಲಿನ ಅಧಿಕಾರಿಗಳು ಈ ಕೆಲಸವನ್ನು ಮಾಡುವುದಿಲ್ಲ. ಸರ್ಕಾರದವರೇ ಮಾಡುವುದಿಲ್ಲ ನಾವೇನಾದರೂ ನಮ್ಮ ಕ್ಷೇತಕ್ಕೆ ಹೋದರೆ, ಅಲ್ಲಿ ನೀರೇ ಬಂದಿಲ್ಲವೆಂದು ನಮ್ಮನ್ನು ಬಡಿಯುತ್ತಾರೆ. ಆದ್ದರಿಂದ ಇದನ್ನು ಯಾರು ಮಾಡಬೇಕು? ನಾನು ಇದರ ಬಗ್ಗೆ ಕಾಲ್ ಅಟೆನ್‌ಷನ್ ನೋಟೀಸ್ ಕೂಡ ಕಳುಹಿಸಿದ್ದೇನೆ. ನಾನು ಯಾವಾಗಲೂ ಇಷ್ಟು ಗಟ್ಟಿಯಾಗಿ ಮಾತನಾಡುವುದೇ ಇಲ್ಲ. ತಪ್ಪುಗೆ ಈ ವಿಚಾರ ಗೊತ್ತಿದೆ ಸರ್ಕಾರದವರು ತಪ್ಪು ಉತ್ತರ ಕೊಟ್ಟರೆ ನಾನೇನು ಹೇಳಬೇಕು? ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗೆ ಸರಿಯಾಗಿ ಹೇಳಲಿ ಹಿಂದೆ ಒಂದು ಸಾರಿ ಸಂಬಂಧಪಟ್ಟ ಚೀಫ್ ಇಂಜಿನಿಯರ್ ನಾಲ್ಕು ಅಂಗುಲಗಳ ಬೋರ್‌ವೆಲ್ ಪಂಪ್‌ಸೆಟ್ ಸರಬರಾಜುಮಾಡಲು ಒಂದು ಟೆಂಡರ್ ಕರೆದಿದ್ದರು. ಆ ಒಂದು ಕಾಂಟ್ರಾಕ್ಟ್ ಮುರಿದುಹೋಯ್ತು ನಾಲ್ಕು ಇಂಚ್ ಪಂಪ್‌ಸೆಟ್ ಸಿಗದೇ ಹೋದರೆ ೬ ಇಂಚುಗಳ ಪಂಪ್‌ಸೆಟ್ ಹಾಕಲಿ ಇದರ ಬಗ್ಗೆಯೂ ಚೀಫ್ ಇಂಜಿನಿಯರುಗೂ ಪತ್ರ ಬರೆದಿದ್ದೇನೆ. ಆದ್ದರಿಂದ ತಂಗಡಗಿ ಗ್ರಾಮದಲ್ಲಿ ನೀರನ್ನು ಒನಗಿಸುವ ಬಗ್ಗೆ ಯಾರೂ ಪ್ರಯತ್ನಮಾಡತ್ತಾ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಯೋಜನೆಮಾಡಿ ಇನ್ನಷ್ಟು ತಾಸುಗಳಲ್ಲಿ ಆ ಗ್ರಾಮಕ್ಕೆ ನೀರು ಒದಗಿಸಿಕೊಡುತ್ತಾರೆ.

ಅಧ್ಯಕ್ಷರು:— ಮಾನ್ಯ ಶ್ರೀ ಸಜ್ಜನ್ ಅವರು ಬಹಳ ಉದ್ವೇಗದಿಂದ ಪ್ರಶ್ನೆಮಾಡುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೂಳ್ಳಬೇಕೋ ಅದನ್ನು ಜಾಗ್ರತೆಯಾಗಿ ತೆಗೆದುಕೊಳ್ಳಿ. ಅವರ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಿಸಿಕೊಡಿ. ಅವರು ಮೊದಲೇ ಹೇಳಿದ ಹಾಗೆ ಅಷ್ಟು ಗಟ್ಟಿಯಾಗಿ ಯಾವಾಗಲೂ ಮಾತನಾಡುವವರಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ವಿಚಾರದ ಬಗ್ಗೆ ಚುಂತ್ರಿಗಳು ಕೂಡಲೇ ಗಮನಿಸಿಕೊಡುವುದು ಒಳ್ಳೆಯದು.

† ಶ್ರೀ ಎನ್. ರಾಚಯ್ಯ:—ಹಿಂದೆ ಮೂಹಂ ಕೆಡೆಗಳಲ್ಲಿಯೂ ನಾಲ್ಕು ಇಂಚುಗಳ ಡಗೂ ಮೋಟರ್ ಬೋರ್‌ವೆಲ್‌ಗಳನ್ನೂ ಮತ್ತು ಪಂಪ್‌ಸೆಟ್‌ಗಳನ್ನೂ ಹಾಕಿದ್ದರು. ಅಲ್ಲಿ ಅವನ್ನು ಸರಿಯಾಗಿ ಉಪಯೋಗ ಪಡಿಸಲಿಲ್ಲ. ಬಹಳ ಬೇಹುಪಾರಾಗಿ ಒರಟಾಗಿ ಉಪಯೋಗಿಸಿದ್ದರಿಂದ ಆ ಪಂಪ್‌ಸೆಟ್‌ಗಳು ಈಗ ಕೆಟ್ಟು ಹೋಗಿವೆ. ಮತ್ತೆ ಅವನ್ನು ದುರಸ್ತಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಕೊನೆಯಪಕ್ಷ ೫ ಇಂಚುಗಳ ಡಯಾಮೋಟರ್ ಬೋರ್‌ವೆಲ್‌ಗಳನ್ನು ಉಪಯೋಗಿಸಿ ಆ ಗ್ರಾಮದಲ್ಲಿ ಸಾಕಷ್ಟು ನೀರನ್ನು ಒದಗಿಸುವುದಕ್ಕೆ ಖಂಡಿತ ತೀಪ್ರವಾಗಿ ಆದೇಶವನ್ನು ಕೊಡುತ್ತೇನೆ. ನಾಲ್ಕು ಇಂಚುಗಳ ಮೆಷಿನ್‌ಗಳು ಸಿಗದಿದ್ದರೆ, ೬ ಇಂಚುಗಳ ಮೆಷಿನ್‌ಗಳನ್ನು ಪರ್ಚೇಜ್ ಮಾಡಿ ಅಲ್ಲಿನ ಜನರಿಗೆ ನೀರಂ ಸೌಕರ್ಯವನ್ನು ಒದಗಿಸಿಕೊಡಲಾಗುತ್ತದೆ. ಅದೂ ಸಹ ಆಗದಿದ್ದ ಪಕ್ಷದಲ್ಲಿ ಓಪನ್‌ವೆಲ್‌ಗಳನ್ನು ಮಾಡಿಸಿ ಆ ಗ್ರಾಮಾಂತರ ಜನಗಳಿಗೆ ನೀರಿನ ಸೌಕಕ್ಷವನ್ನು ಅತಿ ಜಾಗ್ರತೆಯಾಗಿ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

**Construction of New Tank in Barakanalv*

451 SRI N. BASAVAIAH (Chikknayakanahalli)—

Will the Minister of State for Minor Irrigation be pelased to state:—

(*a*) The reason for delay in the construction of the estimated new tank near Barakanalu, Huliyur hobli in chikknayakanahalli Taluk;

(*b*) Whether this will be included in the current year's budget and the work completed?

SRI S. B. NAGARAL (Minister of State for Minor Irrigation)—

(a) Technically not feasible.

(*b*) This question does not arise in view of above reply.

ಶ್ರೀ ಎನ್. ಬಸವಯ್ಯ:—(ಅ) ಪ್ರಶ್ನೆಗೆ ಉತ್ತರವಾಗಿ ಈ ಕೆರೆಯ ನಿರ್ಮಾಣಕಾರ್ಯ ವಿಳಂಬವಾಗಲು ಕಾರಣ, 'ತಾಂತ್ರಿಕವಾಗಿ ಸಾಧ್ಯತೆಯಿಲ್ಲದಿರುವುದು' ಎಂಬುದಾಗಿ ಹೇಳಿದೆ. ಇದರಿಂದ ಕೇವಲ ಅಧಿಕಾರಿಗಳು ಮಾತ್ರ ಉಪಯೋಗ ಪಡೆಯುವಂತಾ ಇರುವುದರಿಂದ, ಈ ಒಂದು ಯೋಜನೆಯನ್ನು ಪುನರ್‌ಪರಿಶೀಲನೆಮಾಡಿ ಅಲ್ಲಿನ ರೈತರಿಗೆ ಅನುಕೂಲವಾಗುವ ಹಾಗೆ ಸೂಕ್ತ ಕ್ರಮವನ್ನಾ ತೆಗೆದುಕೊಳ್ಳುತ್ತೀರಾ?

† ಶ್ರೀ ಎಸ್ ಬಿ. ನಾಗರಾಳ್.—ನಾನು ಉತ್ತರದಲ್ಲಿ ಹೇಳಿರುವ ಹಾಗೆ ಅದು ತಾಂತ್ರಿಕವಾಗಿ ಸಾಧ್ಯವಿಲ್ಲದೇ ಇರುವುದರಿಂದ ಅದನ್ನು ಈಗ ಮಾಡುವುದಕ್ಕೆ ಸಾಧ್ಯವಿಲ್ಲ ಮುಂದೆ ಅದನ್ನು ಸಂಪೂರ್ಣವಾಗಿ ಪರಿಶೀಲನೇಮಾಡುತ್ತೇವೆ.

** Recognition in respect of Derecognised Medical Colleges*

SMT. C. NAGAMMA KESHAVAMURTHY (Davanagere)—

199 (191) Will the Minister for Health be pleased to state:—

(*a*) The names of private and Government Medical Colleges in the State recognised by the Indian Medical Council

(*b*) The conditions laid down for the recognition by the Indian Medical Council;

(*c*) The difficulties faced by the Government in fulfilling those conditions;

(*d*) The action taken by the Government in obtaining recognition in respect of the derecognised colleges in the State?